

# ಯು ಆರ್ ಲುಕ್ಸ್ ಬ್ಯೂಟಿಫುಲ್

ಯು ಆರ್ ಲುಕ್ಸ್ ಬ್ಯೂಟಿಫುಲ್ ಎಂದು ನಾನು ಹೇಳಿದ್ದು
ಆ ನಿಮ್ಮ ನಗುಮುಖದ ಸೌಂದರ್ಯ ನೋಡಿದಾಗಲೇ
ಆ ನಿಮ್ಮ ಮಂದಹಾಸ, ಕಪಟವಿಲ್ಲದ ನೋಟ
ತಿಳಿ ಸರೋವರದಂತಹ ಮುಗ್ಧ ಮನಸ್ಸು

ಭೇದಭಾವವಿಲ್ಲದ ನಡೆ–ನುಡಿ, ಮಾತು–ಕತೆ, ಸಂಭಾಷಣೆ
ಎಲ್ಲವೂ ಬೆರೆತಂತೆ ಇದ್ದ ಆ ನಿಮ್ಮ ವದನ
ಎಲ್ಲವೂ ನನಗೆ ಹಿಡಿಸಿತ್ತು.
ನೋಡಿದ ಆ ಮೊದಲ ದಿನವೆ ನಿಮ್ಮ ನಾನು...

ಏನು ಸುಂದರ ಎಂಥ ಸೊಗಸು
ಎಷ್ಟು ಬಣ್ಣಿಸಿದರೂ ಸಾಲದು ಆ ನಿಮ್ಮ ನೋಟವ
ಸವಿಯ ಹಾಲಿನಂತೆ ಮಧುರ ಜೇನಿನಂತೆ
ಸಿಹಿ ಸಿಹಿ ಅಷ್ಟೇ ಅಲ್ಲ, ಇನ್ನೂ ಏನೇನೊ...

ಎಂಥ ಚೆಲುವು ಎಂಥ ಒಲವು ಎಂಥ ಮೈಮಾಟ ನಿಮ್ಮದು
ಆಹಾ! ಯಾರಾದರೂ ತಿರುಗಿ ನೋಡದೆ ಇರುವರೆ ನಿಮ್ಮ?
ಇಲ್ಲ! ಸದಾ ನೋಡುತ್ತಲೆ ಇರಬೇಕು ನಿಮ್ಮ ಪ್ರತಿಕ್ಷಣ
ಯಾಕೆಂದರೆ ಯು ಆರ್ ಲುಕ್ಸ್ ಬ್ಯೂಟಿಫುಲ್

● **ದೇವನೂರು ನಂದೀಶ**

# ಬಿಟ್ಟಿರಲಾರದ ಒಲವಿಗೆ

ಎಷ್ಟೋ ಹೊತ್ತು ಕಳೆದಿದೆ
ಮೌನ ಮಾತಾಗಿ ಹೊಮ್ಮಿ
ನಗುವಿನ ಹೊಳೆ ಹರಿದಿದೆ
ಸಂತಸದ ಬುಗ್ಗೆ ಚಿಮ್ಮಿ.

ಎಲೆ ಎಲೆಯಲ್ಲಿ ಮೂಡಿದೆ
ಚಿತ್ರಾಕ್ಷರದ ಲಕ್ಷ ಸಂದೇಶ
ಕಣ್ಣು ಕಣ್ಣುಗಳಲ್ಲಿ ಇಣುಕಿದೆ
ಒಲವಿನ ಚಿತ್ತಾರ ಪರಿವೇಶ

ಬಾನಾಡಿ ಪ್ರೀತಿಗಿದೆ ಆಸರೆ
ಮರದ ಮರ್ಮರ ದನಿಯಲ್ಲಿ
ಮನದಾಳದ ಮಾತಿಗೆ ಅಕ್ಕರೆ
ಭಾವನೆ ತುಂಬಿದ ಕಣ್ಣುಗಳಲ್ಲಿ

ಶತಶತಮಾನ ಕಳೆದರೂ ಮುಗಿಯದು
ನಲಿವಿನ ಮಾತುಗಳ ನವಗಾನಯಾನ
ಋತುಗಳು ಉರುಳಿದರೂ ಸಾಲದು
ಅಂಗಸಂಗ ಸವಿದಿರುಳುಗಳ ಜೀವಯಾನ.

ಪ್ರೀತಿಪತಾಕೆ ಹಾರಿಸಲು ಬಾನೆತ್ತರಕ್ಕೆ
ನೆಲದಿಂದ ಮರಕ್ಕೆ ಚಿಮ್ಮಿದ್ದೇವೆ
ಮಧುರತಮ ವಚನಗಳ ಪೂರೈಸಲಿಕ್ಕೆ
ಆಣೆ–ಭಾಷೆಗಳಲ್ಲಿ ಬದ್ಧರಾಗಿದ್ದೇವೆ.

● **ಬೇದ್ರೆ ಮಂಜುನಾಥ**

